# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 13.09.2011**

ಶಿವಾಜಿನಗರದ ಆರ್ಮ್‌ಸ್ಟ್ರಾಂಗ್ ರಸ್ತೆಗೆ ಹೊಂದಿಕೊಂಡಿರುವ ಮಳೆ ನೀರುಗಾಲುವೆ ಪುನರ್ ನಿರ್ಮಾಣ ಮಾಡದೇ ತಡೆಗೋಡೆ ಒಡೆದು ಹಾಕಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ, ಈ ಕಾರ್ಯವನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಬೇರೆ ಗುತ್ತಿಗೆದಾರರಿಗೆ ವಹಿಸಿಕೊಡಲು ಮಹಾಪೌರರು ಮುಖ್ಯ ಅಭಿಯಂತರರಿಗೆ ಆದೇಶ ನೀಡಿದರು.

ಮಳೆ ನೀರು ಮೋರಿ ನಿರ್ಮಾಣ ಸಂದರ್ಭದಲ್ಲಿ ಗುತ್ತಿಗೆದಾರರು ಎರಡು ಕಡೆ ತಡೆಗೋಡೆ ಕೆಡವಿದರಿಂದ ಮಳೆಯಾದಾಗ ಚರಂಡಿ ನೀರು ಉಕ್ಕಿ ಹರಿದು ಸುತ್ತಮುತ್ತಲಿನ ರಸ್ತೆಯ ಮನೆಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದನ್ನು ಮಹಾಪೌರರು ಮನೆಗಳಿಗೆ ತೆರಳಿ ಪರಿಶೀಲನೆ ನಡೆಸಿದರು. ಕೂಡಲೇ ಕಾಮಗಾರಿಯನ್ನು ಬೇರೆ ಗುತ್ತಿಗೆದಾರರಿಗೆ ವಹಿಸಿಕೊಟ್ಟು ಕಾಂಕ್ರೀಟ್ ತಡೆಗೋಡೆ ನಿರ್ಮಿಸಿ ಸಮಸ್ಯೆಗೆ ಪರಿಹಾರ ದೊರಕಿಸಿಕೊಡುವುದಾಗಿ ಸಾರ್ವಜನಿಕರಿಗೆ ಮಹಾಪೌರರು ಭರವಸೆ ನೀಡಿದರು.

ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ಇಂದು ವಾರ್ಡ್ ನಂ.90, 92 ಮತ್ತು 93 ವಾರ್ಡ್‌ಗಳಲ್ಲಿ ತಪಾಸಣೆ ಕೈಗೊಂಡು ಮೊದಲಿಗೆ ಕಾಮರಾಜ ರಸ್ತೆ ಮತ್ತು ಡಿಕೆನ್‌ಸನ್ ರಸ್ತೆ ಕೂಡುವ ಜಂಕ್ಷನ್‌ಗೆ ಭೇಟಿ ನೀಡಿ, ಕಳೆದ ಹಲವಾರು ತಿಂಗಳಿಂದ ಈ ರಸ್ತೆಯಲ್ಲಿ ಜಲಮಂಡಳಿ ಪೈಪ್‌ಗಳಿಂದ ನೀರು ಸೋರಿಕೆಯಾಗುತ್ತಿರುವುದರಿಂದ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿ ವಾಹನ ಸಂಚಾರಕ್ಕೆ ತೊಂದರೆಯಾಗುವುದನ್ನು ಗಮನಿಸಿದ ಮಹಾಪೌರರು ಜಲಮಂಡಳಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಜಲಮಂಡಳಿಯ ನಿರ್ಲಕ್ಷತನದಿಂದ ರಸ್ತೆಗಳೆಲ್ಲಾ ಹಾಳಾಗುತ್ತಿವೆ. ಅಧಿಕಾರಿಗಳು ಏನಾದರೊಂದು ಕುಂಟುನೆಪ ಹೇಳಿ ತಪ್ಪಿಸಿಕೊಳ್ಳುವುದು ರೂಢಿಸಿಕೊಂಡಿದ್ದಾರೆ. ನೀವು ಸಬೂಬುಗಳನ್ನು ಹೇಳುವುದನ್ನು ಬಿಟ್ಟು, ಒಂದು ವಾರದೊಳಗೆ ನೀರು ಸೋರಿಕೆಯಾಗುವುದನ್ನು ನಿಲ್ಲಿಸಿ, ಆಮೇಲೆ ಪಾಲಿಕೆ ಅಧಿಕಾರಿಗಳು ರಸ್ತೆ ದುರಸ್ಥಿ ಕೆಲಸ ಮಾಡುತ್ತಾರೆ. ಒಂದು ವಾರದ ನಂತರ ವರದಿ ಪಡೆದುಕೊಂಡು ಪುನರ್ ಪರಿಶೀಲನೆ ನಡೆಸುವುದಾಗಿ ತಿಳಿಸಿದರು.

ಕಮರ್ಷಿಯಲ್ ರಸ್ತೆ ಪರಿಶೀಲನೆ ನಡೆಸುತ್ತಿರುವಾಗ ಶಾಸಕರಾದ ಶ್ರೀ ರೋಷನ್ ಬೇಗ್ ರವರು ಮಾತನಾಡಿ, ಈ ರಸ್ತೆಯಲ್ಲಿರುವ ಅಂಗಡಿ ಮಾಲೀಕರು Self Hoarding ಹಾಕಿಕೊಳ್ಳುವುದಲ್ಲದೆ ರಸ್ತೆ ಅಡ್ಡಲಾಗಿ ದೊಡ್ಡ ದೊಡ್ಡ ಜಾಹೀರಾತು ಫಲಕ ಹಾಕಿಕೊಂಡು ಕಾನೂನು ಉಲ್ಲಂಘನೆ ಮಾಡಿದ್ದಾರೆ. ಮತ್ತು ಪಾಲಿಕೆಗೆ ಒಂದು ರೂಪಾಯಿ ಕೂಡಾ ಶುಲ್ಕ ಪಾವತಿಸುವುದಿಲ್ಲ. ಅಧಿಕಾರಿಗಳು ಇವರ ಮೇಲೆ ಏಕೆ ಕರುಣೆ ತೋರಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು. ಮಹಾಪೌರರು ಸ್ಥಳದಲ್ಲಿದ್ದ ವಲಯ ಜಂಟಿ ಆಯುಕ್ತರಿಗೆ ಆದೇಶ ನೀಡಿ, ಕೂಡಲೇ ಪರಿಶೀಲನೆ ನಡೆಸಿ ಫಲಕಗಳನ್ನು ತೆರವುಗೊಳಿಸಲು ತಿಳಿಸಿದರು.

ಕಾಮರಾಜ ರಸ್ತೆಯಲ್ಲಿ ಶುಭಾಂಜಲಿ ಗಾರ್ಮೆಂಟ್ಸ್ ಶೋ ರೂಮ್ ರವರು ತಮ್ಮ ವಾಣಿಜ್ಯ ಕಟ್ಟಡದ ತಳಮಹಡಿಯಲ್ಲಿ ವಾಹನ ನಿಲುಗಡೆಗಾಗಿ ನಿಗದಿಪಡಿಸಿದ ಸ್ಥಳವನ್ನು ಅಂಗಡಿಗಳಾಗಿ ಪರಿವರ್ತಿಸಿದ್ದನ್ನು ಗಮನಿಸಿ ಕೂಡಲೇ ಕಟ್ಟಡದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಿದರು.

ಶಿವಾಜಿನಗರದ ವೀರಪಿಳ್ಳೆ ಸ್ಟ್ರೀಟ್, ಆರ್ಮ್‌ಸ್ಟ್ರಾಂಗ್ ರಸ್ತೆ, ನಾಲಾ ರಸ್ತೆ ಮುಂತಾದ ಕಡೆ ಪರಿಶೀಲನೆ ನಡೆಸಿ, ನಾಲಾ ರಸ್ತೆಯ ಮುಖಾಂತರ ಹರಿಯುವ ಮಳೆ ನೀರು ಮೋರಿಯಿಂದ ಹೂಳೆತ್ತುವ ಕಾಮಗಾರಿ ಪರಿಶೀಲಿಸಿದರು. ಅಲ್ಲಿ ನೆರೆದಿದ್ದ ಅಂಗಡಿ ಮಾಲೀಕರು ಮತ್ತು ಸಾರ್ವಜನಿಕರು ಮಹಾಪೌರರಿಗೆ ಮನವಿ ಮಾಡಿ, ಅನೇಕ ದಿನಗಳಿಂದ ಈ ಕೆಲಸ ನಡೆಯುತ್ತಿದೆ. ಆದರೆ, ಇದರಿಂದ ನಮಗೆ ಪರಿಹಾರ ದೊರಕುತ್ತಿಲ್ಲ. ಮಳೆ ಬಂದಾಗ ಮತ್ತೆ ಹೂಳು ತುಂಬಿ ಸಮಸ್ಯೆ ಉಂಟಾಗುತ್ತದೆ. ಆದ್ದರಿಂದ ಖಾಯಂ ಪರಿಹಾರ ದೊರಕಿಸಲು ಕೋರಿದರು. ಬೃಹತ್ ನೀರುಗಾಲುವೆ ಮುಖ್ಯ ಅಭಿಯಂತರರು ಹಾಗೂ ತಜ್ಞರ ಜೊತೆ ಚರ್ಚಿಸಿ, ಇದಕ್ಕೆ ಒಂದು ವಿಶೇಷ ಯೋಜನೆ ರೂಪಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ತದನಂತರ ರಸಲ್ ಮಾರ್ಕೆಟ್‌ಗೆ ಭೇಟಿ ನೀಡಿ, ಸ್ವಚ್ಛತೆ ಮತ್ತು ನೈರ್ಮಲ್ಯ ಕಾರ್ಯದ ಪರಿಶೀಲನೆ ನಡೆಸಿದರು. ಮಾರುಕಟ್ಟೆ ಸ್ವಚ್ಛತೆಗೆ ವಿಶೇಷ ಗಮನಹರಿಸಿ, ಪ್ರತಿನಿತ್ಯ ಸಮಯಕ್ಕೆ ಅನುಸಾರ ಕಸ ವಿಲೇವಾರಿ, ಔಷಧಿ ಸಿಂಪಡಣೆ ಮುಂತಾದವುಗಳನ್ನು ಕೂಡಲೇ ನಿರ್ವಹಿಸಬೇಕು. ತಪಾಸಣೆ ಬರುವ ದಿನ ಸ್ವಚ್ಛ ಮಾಡಿದರೆ ಸಾಲದು. ಅದು ನಿರಂತರ ನಡೆಯಬೇಕೆಂದು ಪರಿಸರ ಅಭಿಯಂತರರಿಗೆ ತಿಳಿಸಿದರು. ಮಹಾಪೌರರು ಬಂದು ತಪಾಸಣೆ ನಡೆಸುವರೆಗೆ ಅಧಿಕಾರಿಗಳು ಏನು ಮಾಡುತ್ತೀರಿ. ನೀವೆಲ್ಲಾ ಇದನ್ನೆಲ್ಲಾ ಪ್ರತಿದಿನ ಗಮನಿಸುವುದಿಲ್ಲವೇ? ಇದು ಸರಿಯಾದ ಕ್ರಮವಲ್ಲ. ಅಧಿಕಾರಿಗಳು ಮುಂದೆಯೂ ಕೂಡಾ ಇದೇ ರೀತಿ ನಡೆದುಕೊಂಡರೆ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ತಪಾಸಣೆ ಸಂದರ್ಭದಲ್ಲಿ ಸ್ಥಳೀಯ ಶಾಸಕರಾದ ಶ್ರೀ ಆರ್. ರೋಷನ್ ಬೇಗ್, ಉಪ ಮಹಾಪೌರರಾದ ಶ್ರೀ ಎಸ್. ಹರೀಶ್, ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ, ಪಾಲಿಕೆ ಸದಸ್ಯರಾದ ಶ್ರೀ ಶಕೀಲ್ ಅಹಮದ್, ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**